# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,

# ದಾವಣಗೆರೆ.

## ಎಸ್.ಸಿ. ಸಂಖ್ಯೆ 54/2024

ಫಿರ್ಯಾದುದಾರರು: ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ಅಜಾದ್ ನಗರ ಪೋಲೀಸ್ ಠಾಣೆ, ದಾವಣಗೆರೆ.

-ವಿರುದ್ಧ-

ಆರೋಪಿತರು:- ಕಾಗೆ ಸಂತೋಷ @ ಸಂತೋಷ ವಿ ತಂದೆ ವೆಂಕಟೇಶ್,
ಮತ್ತು ಇನ್ನೊಬ್ಬರು.

. . . . .

## -ದೋಷಾರೋಪಣೆ-

ಶ್ರೀಮತಿ ವೇಲಾ ಡಿ.ಕೆ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತರಾದ:-

1. ಕಾಗೆ ಸಂತೋಷ @ ಸಂತೋಷ ವಿ ತಂದೆ ವೆಂಕಟೇಶ್, ವಯಸ್ಸು: 24 ವರ್ಷ, ಉದ್ಯೋಗ: ಚಾಲಕ, ವಾಸ: 5 ನೇ ಕ್ರಾಸ್, ಮುದಭಾವಿ ಕಾಲೋನಿ, ದಾವಣಗೆರೆ.
2. ಪ್ರಭು ಪಿ @ ಅಪ್ಪು ತಂದೆ ಪರಶುರಾಮ್, ವಯಸ್ಸು: 21 ವರ್ಷ, ವಾಸ: ಹುಚ್ಚಂಗೆಮ್ಮ ದೇವಸ್ಥಾನ ಹತ್ತಿರ, ಬಂಬೂ ಬಜಾರ್ ರೋಡ್, ದಾವಣಗೆರೆ.

ನಿನ್ನನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ:-

ಮೊದಲನೇಯದಾಗಿ, ದಿನಾಂಕ 05.11.2023 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ದಾವಣಗೆರೆ ನಗರದ ಜಗಳೂರು ಬಸ್ ನಿಲ್ದಾಣದ ಗಣೇಶ ದೇವಸ್ಥಾನದ ಮುಂದಿನ ಬಂಬೂಬಜಾರ್ ರಸ್ತೆಯಲ್ಲಿರುವ ಡೋರ್ ನಂ.821/2B ರಲ್ಲಿರುವ ಎಸ್.ಆರ್. ಬಾರ್ & ರೆಸ್ಟೋರೆಂಟ್ ನಲ್ಲಿ ಚಾಸಾ.1 ಆಕಾಶ್ ಎಸ್.ಬಿ ಮತ್ತು ಚಾಸಾ.5 ಕುಮಾರ್ ರವರು ಕೌಂಟರ್ ನಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿತರಾದ ನೀವು ಬಾರ್ ಕೌಂಟರ್ ಬಳಿ ಬಂದು ಚಾಸಾ.1 ಮತ್ತು ಚಾಸಾ.5 ರವರಿಗೆ ಕೋಲ್ಡ್ ಬೀರ್ ಕೇಳಿದ್ದು, ಚಾಸಾ.1 ರವರು ಕೋಲ್ಡ್ ಬೀರ ಖಾಲಿಯಾಗಿದೆ ವಾರಮ್ ಬೀರು ಇರುತ್ತದೆ ಅಂತಾ ಹೇಳಿದ್ದಕ್ಕೆ, ಕೋಲ್ಡ್ ಬೀರ್ ಇಲ್ಲ

ಅಂದರೆ ಏಕೆ ಬಾಟ್ ಇಟ್ಟುಕೊಂಡಿದ್ದೀರಾ ಸೂಳೆ ಮಕ್ಕಳ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಉದ್ದೇಶಪೂರ್ವಕವಾಗಿ ಅವಮಾನ ಮಾಡಿ ಆ ಮೂಲಕ ಚಾಸಾ.1 ಮತ್ತು ಚಾಸಾ.5 ಇವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂಥ ಉದ್ರೇಕದಿಂದ ಚಾಸಾ.1 ಮತ್ತು ಚಾಸಾ.5 ಇವರು ಶಾಂತಿಭಂಗವನ್ನು ಉಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೆ ಆಗುವ ಸಂಭವವಿದೆಯೆಂದು ತಿಳಿದು ಉದ್ದೇಶಪೂರ್ವಕವಾಗಿ ಚಾಸಾ.1 ಮತ್ತು ಚಾಸಾ.5 ಇವರನ್ನು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1ನೇ ಆರೋಪಿತನಾದ ನೀನು ಕೈಗಳಿಂದ ಚಾಸಾ.1 ರವರ ಕಪಾಳಕ್ಕೆ ಹೊಡೆದು ಅವರು ತಪ್ಪಿಸಿಕೊಂಡಿದ್ದು, ಆಗ ಅವರ ಎಡ ಕುತ್ತಿಗೆ ಹತ್ತಿರ ಪೆಟ್ಟು ಬಿದ್ದು ನೋವುಂಟು ಮಾಡಿದ್ದು ಮತ್ತು ಚಾಸಾ.6 ಸತೀಶ್ ರವರನ್ನು ಬಾರ್ ಮುಂಭಾಗದಲ್ಲಿ ಎಳೆದಾಡಿ ಕೈ ಕಾಲುಗಳಿಂದ ಹೊಡೆದು ಸ್ವಇಚ್ಛೆಯಿಂದ ಸಾದಾ ಸ್ವರೂಪದ ಗಾಯ ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ಎಸ್.ಆರ್.ಬಾರ್ & ರೆಸ್ಟೋರೆಂಟ್ ನ ಒಳಗೆ ಅಕ್ರಮವಾಗಿ ಪ್ರವೇಶ ಮಾಡಿರುತ್ತೀರಿ. ಆ ಮೂಲಕ ಆರೋಪಿರಾದ ನೀವು ಭಾರತ ದಂಡ ಸಂಹಿತೆಯ ಕಲಂ 448 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1 ಮತ್ತು 2ನೇ ಆರೋಪಿತರಾದ ನೀವು ಬಾರ್ ಕೌಂಟರ್ ಒಳಗೆ ನುಗ್ಗಿ ಚಾಸಾ.1 ರವರನ್ನು ಸಾಯಿಸಬೇಕೆಂಬ ಉದ್ದೇಶದಿಂದ 1ನೇ ಆರೋಪಿತನಾದ ನೀನು ನಿನ್ನ ಪ್ಯಾಂಟಿನ ಹಿಂಬದಿ ಬಲ ಜೇಬಿನಲ್ಲಿದ್ದ ಚಾಕುವನ್ನು ತೆಗೆದು ಮಾರಣಾಂತಿಕ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಚಾಸಾ.1 ರವರು ಕೂಗಾಡಿ ತಪ್ಪಿಸಿಕೊಂಡಾಗ, ಸ್ಥಳಕ್ಕೆ ಬಂದ ಚಾಸಾ.6, ಚಾಸಾ.7 ರವರಿಗೆ ಚಾಕುವಿನಿಂದ ತಿವಿದು ಗಾಯವನ್ನುಂಟು ಮಾಡಿದ್ದು, ಆರೋಪಿತರಾದ

ನೀವು ಯಾವ ಕೃತ್ಯವನ್ನು ಯಾವ ಉದ್ದೇಶ ಅಥವಾ ತಿಳುವಳಿಕೆಯಿಂದ ಮತ್ತು ಯಾವ ಪರಿಸ್ಥಿತಿಯಲ್ಲಿ ಮಾಡಿದರೆ ಆ ಕೃತ್ಯದಿಂದ ಮರಣವನ್ನುಂಟು ಮಾಡಿದರೆ ಕೊಲೆಯ ಬಗ್ಗೆ ತಪ್ಪಿತಸ್ಥರಾಗುತ್ತೀರೆಂದು ತಿಳಿದು, ಸದರಿ ಕೃತ್ಯವನ್ನು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 307 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತರಾದ ನೀವು ಚಾಸಾ.1, ಚಾಸಾ.5 ಮತ್ತು ಚಾಸಾ.6 ರವರಿಗೆ ಕೊಲೆ ಮಾಡುತ್ತೇವೆಂದು ಪ್ರಾಣಬೆದರಿಕೆ ಹಾಕಿ ಆ ಮೂಲಕ ಅಪರಾಧಿಕ ಬಯೋತ್ಪಾದನೆಯನ್ನುಂಟು ಮಾಡಿ, ಚಾಸಾ.1, ಚಾಸಾ.5 ಮತ್ತು ಚಾಸಾ.6 ಇವರಿಗೆ ಅಪಾಯದ ಭೀತಿಯನ್ನು ಹುಟ್ಟಿಸುವಂಥ ಉದ್ದೇಶವಾಗಿತ್ತು ಮತ್ತು ಅವರು ಮಾಡಬೇಕಾದ ಕೃತ್ಯವನ್ನು ಮಾಡದಂತೆ ಉದ್ದೇಶಿಸಿ ಮಾಡಿದ್ದಾಗಿತ್ತು. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 27 ನೇ ದಿವಸ ಮೇ ಮಾಹೆಯ 2025 ನೇ ಇಸವಿಯಂದು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.